

# ದಂತ ಕಸಿ

**ಹಲ್ಲನ್ನು ಬಾಯಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸರ್ಜರಿ ಮೂಲಕ ಸ್ಥಳಾಂತರಿಸುವ ತಂತ್ರಜ್ಞಾನ ಬಂದಿದ್ದು, ಇದು ಹಲ್ಲುಗಳ ಸುರಕ್ಷತೆ ನಿಟ್ಟಿನಲ್ಲಿ ವರದಾನ.**

■ ಡಾ. ಮುರಲೀ ಮೋಹನ್ ಚೂಂತಾರು

ಒಬ್ಬ ವ್ಯಕ್ತಿಯ ಬಾಯಿಯೊಳಗೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹಲ್ಲನ್ನು ಸುರಕ್ಷಿತವಾಗಿ ಸರ್ಜರಿ ಮುಖಾಂತರ ಸ್ಥಳಾಂತರಿಸುವುದನ್ನು ದಂತ ಕಸಿ (ಡೆಂಟಲ್ ಟ್ರಾನ್ಸ್‌ಪ್ಲಾಂಟ್) ಎಂದು ಕರೆಯುತ್ತಾರೆ. ಆಟೋಜೀನಸ್ ಟ್ರಾನ್ಸ್‌ಪ್ಲಾಂಟ್ ಎಂದೂ ಕರೆಯುತ್ತಾರೆ.

ಒಬ್ಬ ವ್ಯಕ್ತಿಯ ನೈಸರ್ಗಿಕ ಹಲ್ಲನ್ನು ಇನ್ನೊಂದು ವ್ಯಕ್ತಿಗೆ ಬದಲಿ ಜೋಡಣೆ ಮಾಡಲು ಸಾಧ್ಯವಿಲ್ಲ. ಆದರೆ ಒಬ್ಬ ವ್ಯಕ್ತಿಯ ಬಾಯಿಯೊಳಗೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹಲ್ಲನ್ನು ಸ್ಥಳಾಂತರಿಸಲು ಸಾಧ್ಯವಿದೆ. ಬಹಳ ಜಾಗರೂಕತೆಯಿಂದ ಮಾಡಬೇಕಾದ ಸೂಕ್ಷ್ಮಮತಿಯ ಸರ್ಜರಿ ಇದಾಗಿದ್ದು, ಹಲ್ಲಿನ ಬೇರಿನ ಜಾಗಕ್ಕೆ ಯಾವುದೇ ರೀತಿಯ ಗಾಸಿ ಮಾಡಬಾರದು.

ಹಿಂದಿನ ಕಾಲದಲ್ಲಿ ಆ್ಯಂಟಿಬಯೊಟಿಕ್ ಲಭ್ಯವಿರದೇ ಇರುವುದರಿಂದ ಈ ಆಟೊಟ್ರಾನ್ಸ್‌ಪ್ಲಾಂಟೇಷನ್ ಸಾಧ್ಯವಿರಲಿಲ್ಲ. ಈಗ ಸುರಕ್ಷಿತವಾದ ಆ್ಯಂಟಿಬಯೊಟಿಕ್ ಲಭ್ಯತೆ, ಸರ್ವ ಸುಸಜ್ಜಿತ ಸಲಕರಣೆಗಳು ಮೂರು ಆಯಾಮದ ಕ್ಷಕಿರಣದ ಲಭ್ಯತೆ ಮತ್ತು ಕೌಶಲ್ಯಭರಿತ ವೈದ್ಯರ ಕೈಚಳಕದಿಂದಾಗಿ ಈ ಆಟೊಟ್ರಾನ್ಸ್‌ಪ್ಲಾಂಟೇಷನ್ ಹೆಚ್ಚು ಸುರಕ್ಷಿತ ಮತ್ತು ಧನಾತ್ಮಕ ಫಲಿತಾಂಶ ನೀಡುತ್ತದೆ.

## ಎಲ್ಲಿ ಮಾಡುತ್ತಾರೆ ?

ಸಾಮಾನ್ಯವಾಗಿ ಕೆಳಗಿನ ದವಡೆಯ ಮೊದಲನೇ ದವಡೆ ಹಲ್ಲು ಹುಳುಕಾಗಿ ಬೇಗನೆ ಹಾಳಾಗುತ್ತದೆ. ಇದು ಮೊದಲು ಬರುವ ದವಡೆ ಹಲ್ಲಾಗಿದ್ದು ಸುಮಾರು 7ರಿಂದ 8 ವರ್ಷಕ್ಕೆ ಬಾಯಿಯೊಳಗೆ ಮೂಡುತ್ತದೆ. ಮಕ್ಕಳು ಹಲ್ಲಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸದೇ ಇರುವ ಕಾರಣದಿಂದ ಹೆಚ್ಚಿನ ಸಂದರ್ಭಗಳಲ್ಲಿ ದಂತ ವೈದ್ಯರ ಬಳಿ ಬಂದಾಗ ಹಲ್ಲು ಪೂರ್ತಿಯಾಗಿ ಹಾಳಾಗಿ ಬೇರುನಾಳ ಚಿಕಿತ್ಸೆ (ರೂಟ್ ಕೆನಾಲ್) ಮಾಡಿ ಉಳಿಸಲು ಆಗದ ಸ್ಥಿತಿಗೆ ಬಂದಿರುತ್ತದೆ. ಇಂತಹ ಸಂದರ್ಭಗಳಲ್ಲಿ ಮೂರನೆ ದವಡೆ ಹಲ್ಲನ್ನು ಪೂರ್ತಿಯಾಗಿ ಸರ್ಜರಿ ಮುಖಾಂತರ ತೆಗೆದು ಅದನ್ನು ಮೊದಲನೇ ದವಡೆ ಹಲ್ಲು ಕಿತ್ತ ಜಾಗಕ್ಕೆ ಸ್ಥಳಾಂತರ ಮಾಡಲಾಗುತ್ತದೆ. ಯಾವುದೇ ರೀತಿಯ ಸೋಂಕು ತಗುಲದಂತೆ ಎಲ್ಲಾ ರೀತಿಯ ಮುಂಜಾಗರೂಕತೆ ತೆಗೆದುಕೊಂಡು ದಂತ ಕ್ಷಕಿರಣದ ಮುಖಾಂತರ ದವಡೆ ಹಲ್ಲಿನ ಬೇರಿನ ರಚನೆ, ಸಂಖ್ಯೆ, ಎಲುಬಿನ ಆಕಾರ, ಗಾತ್ರಗಳನ್ನು ಪರಿಶೀಲನೆ ಮಾಡಿ ದಂತ ವೈದ್ಯರು ಈ ಸಲಹೆಯನ್ನು ಮಾಡುತ್ತಾರೆ.

## ಯಾವಾಗ ದಂತ ಕಸಿ ಮಾಡಬಹುದು?

ಸಾಮಾನ್ಯವಾಗಿ ಈ ಸರ್ಜರಿಯನ್ನು 20ರ ವಯಸ್ಸಿನಲ್ಲಿ ಮಾಡುತ್ತಾರೆ. ಮೂರನೇ ದವಡೆ ಹಲ್ಲು 17ರಿಂದ 21ರ ವಯಸ್ಸಿನಲ್ಲಿ ಬಾಯಿಯೊಳಗೆ ಮೂಡುತ್ತದೆ. 17ನೇ ವರ್ಷಕ್ಕೆ ಮೂರನೇ ದವಡೆ ಹಲ್ಲು ಸಂಪೂರ್ಣವಾಗಿ ಬೆಳೆದು ಬೇರಿನ ರಚನೆ ಮುಗಿದಿರುತ್ತದೆ. ಈ ವಯಸ್ಸಿನಲ್ಲಿ ಹಾಳಾಗಿ ಹೋದ ಮೊದಲ ದವಡೆ ಹಲ್ಲನ್ನು ಸರ್ಜರಿ ಮುಖಾಂತರ ಬೇರು ಮುರಿಯದಂತೆ ಪೂರ್ತಿಯಾಗಿ ಕಿತ್ತು ತೆಗೆಯಲಾಗುತ್ತದೆ. ಈ ಹಲ್ಲಿನ ಬೇರಿನ ಸುತ್ತಲಿನ ಎಲುಬಿಗೆ ಗಾಸಿಯಾಗದಂತೆ ನಿಗಾ ವಹಿಸಲಾಗುತ್ತದೆ. ಅದೇ ಸಮಯದಲ್ಲಿ ದವಡೆಯ ಅದೇ ಭಾಗದ ಮೂರನೇ ಹಲ್ಲನ್ನು ಪೂರ್ತಿಯಾಗಿ ಕಿತ್ತು ಮೊದಲನೆ ದವಡೆ ಹಲ್ಲನ್ನು ಕಿತ್ತ ಭಾಗಕ್ಕೆ ಕೂರಿಸಿ ಜೋಡಿಸಲಾಗುತ್ತದೆ. ಮೂರನೇ ದವಡೆ ಹಲ್ಲು ಕಿತ್ತ ಜಾಗಕ್ಕೆ ಹೊಲಿಗೆ ಹಾಕಲಾಗುತ್ತದೆ. ಅದೇ ರೀತಿ ಮೊದಲಿನ ದವಡೆ ಹಲ್ಲಿನ ಜಾಗದಲ್ಲಿ ಮೂರನೇ ದವಡೆ ಹಲ್ಲನ್ನು ಸರಿಯಾಗಿ ಕೂರಿಸಿ, ಮೇಲುಗಡೆ ದವಡೆ ಹಲ್ಲಿನಿಂದ ಹೆಚ್ಚಿನ ಒತ್ತಡ ಬೀಳದಂತೆ ಜೋಡಿಸಲಾಗುತ್ತದೆ. ಹಲ್ಲಿನ ಸುತ್ತ ವಸಡನ್ನು ಬಿಗಿಯಾಗಿ ಹಲ್ಲಿಗೆ ಹೊಲಿಗೆ ಹಾಕಿ ಹಲ್ಲನ್ನು ಅಲುಗಾಡದಂತೆ ಬಿಗಿದಿಡಲಾಗುತ್ತದೆ.

ಎಲ್ಲ ಸರ್ಜರಿಯನ್ನು ಸ್ಥಳೀಯ ಅರಿವಳಿಕೆ (local anasthesia) ಕೊಟ್ಟು ಮಾಡಲಾಗುತ್ತದೆ. ಈ ಸರ್ಜರಿ ನಡೆಸಿದ ಬಳಿಕ ಎರಡು ವಾರಗಳ ಕಾಲ ಆ ಜಾಗದಲ್ಲಿ ಗಟ್ಟಿಯಾದ ಆಹಾರ ಅಗಿಯದಂತೆ ನಿರ್ದೇಶನ ನೀಡಲಾಗುತ್ತದೆ. ಸೋಂಕು ತಗಲಬಾರದೆಂಬ ದೃಷ್ಟಿಯಿಂದ ಆ್ಯಂಟಿಬಯೊಟಿಕ್ ಹಾಗೂ ನೋವು ನಿವಾರಣೆಗೆ ನೋವು ನಿವಾರಕ ಔಷಧಿ ನೀಡುತ್ತೇವೆ. ನುರಿತ ದಂತ ವೈದ್ಯರು ಅಥವಾ ಬಾಯಿ ಮುಖ ದವಡೆ ಶಸ್ತ್ರಚಿಕಿತ್ಸಕರು ಮಾತ್ರ ಈ ಆಪರೇಷನ್ ಮಾಡಬಲ್ಲರು. ■